ಕೋಟು, ಅಂಗಿ ಕಂಡು ಸೈಜ್ ಚೆಕ್ ಮಾಡಲು ಬಂದವನು ಇವನನ್ನೇ ಮಿಕಿ ಮಿಕಿ ನೋಡತೊಡಗಿದ.

"ಇದು ಯಾವೂರು" ಫಕೀರ ಅವನನ್ನು ಹೆದರುತ್ತ ಪಿಸುದನಿಯಲ್ಲಿ ಕೇಳಿದ. ಅವನು ಇವನನ್ನು ಯಾವುದೋ ಪ್ರಾಣಿಯನ್ನು ನೋಡುವಂತೆ ನೋಡುತ್ತ ಹೇಳಿದ, "ಇದು ಹುಬ್ಬಳ್ಳಿ, ನಿಮ್ಮೂರು ಯಾವುದು?"

ಫಕೀರ ತನ್ನೂರ ಹೆಸರು ಹೇಳಿದ. ತನ್ನ ಹಳ್ಳಿಯ ಡಾಂಬರು ರಸ್ತೆಯಲ್ಲಿ ಓಡಾಡುವ ಕೆಂಪು ಬಸ್ಸುಗಳು ಹಾಗಾದರೆ ಇಲ್ಲಿಂದಲೇ ಹೊರಡುತ್ತವೆ!

ಫಕೀರನಿಗೀಗ ತನ್ನ ಬಟ್ಟೆಗಳನ್ನು ಹಾಕಲು ಹೊಸ ಡಕ್ ಬ್ಯಾಗ್ ಬಂದಿತ್ತು. ಅದನ್ನು ಅವನ ಬೆನ್ನಿಗೇರಿಸಿದರು. ಇನ್ನು ಹೊಸ ಚಪ್ಪಲಿ ಖರೀದಿ. ಯಾರಾರೊ ಮೆಟ್ಟಿ ಬಿಟ್ಟಿದ್ದ ಚಪ್ಪಲಿಗಳನ್ನೇ ಧರಿಸುತ್ತ ಬಂದಿದ್ದ ಅವನಿಗೆ ಅಷ್ಟೊಂದು ತರಾವರಿ ಚಪ್ಪಲಿಗಳಿರುವುದನ್ನು ಕಂಡು ಯಾವುದನ್ನು ತೆಗೆದುಕೊಳ್ಳಬೇಕೆಂದು ಪೇಚಾಡುತ್ತಿರುವಾಗಲೆ ಅವರೇ ಒಂದು ಜೊತೆ ಆಯ್ಕೆ ಮಾಡಿದರು. ಯಾವುದಕ್ಕೂ ಇರಲಿ ಎಂದು ಕ್ಯಾನ್‌ವಾಸ್ ಶೂಗಳು, ಸಾಕ್ಸ್‌ಗಳೂ ಬಂದವು. ಹಳೆಯ ಚಪ್ಪಲಿಗಳನ್ನು ಅಲ್ಲೇ ಬಿಟ್ಟು ಹೊಸ ಚಪ್ಪಲಿ ಹಾಕಿಕೊಂಡೇ ಹೊರಬಂದ.

ತನ್ನ ಬ್ಯಾಗನ್ನು ಕಾರಿನಲ್ಲಿಡುವಾಗ ತನ್ನ ಬಟ್ಟೆ ಗಂಟು ಮಾಯವಾದುದನ್ನು ಗಮನಿಸಿದ. ಅತ್ತಿತ್ತ ನೋಡಿದ. ಅದು ರಸ್ತೆಯ ಪಕ್ಕದ ಫುಟ್‌ಪಾತ್ ಆಚೆ ಬಿದ್ದಿತ್ತು. ಈಗ ಹೆಚ್ಚು ಮಾತುಗಳ ಅವಶ್ಯಕತೆ ಇರಲಿಲ್ಲ. ಹೋಟೆಲ್ ರೂಮಿಗೆ ಹೋಗುವ ಮೊದಲು ಫಕೀರನ ಕ್ಷೌರವಾಯಿತು. ಮುಖ, ತಲೆ ಲಕಲಕ ಹೊಳೆಯತೊಡಗಿದ್ದವು. ಹೋಟೆಲ್ ರೂಮಿಗೆ ಹೋದ ನಂತರ ಬಿಸಿನೀರಿನ ಸ್ನಾನ ಮತ್ತು ಪುಷ್ಕಳ ಊಟ ಮತ್ತು ಅವನಿಗೆ ಹಲವಾರು ಸೂಚನೆಗಳನ್ನು ಕೊಟ್ಟರು. ಅವುಗಳಲ್ಲಿ ಕೆಲವು ಅರ್ಥವಾದವು, ಕೆಲವು ತಿಳಿಯಲಿಲ್ಲ. ಸುರೇಶಣ್ಣ ತನಗಾಗಿ ಇಷ್ಟೆಲ್ಲ ಏಕೆ ಮಾಡಿಸುತ್ತಿರಬಹುದೆಂದು ಫಕೀರ ಬಹು ಗಹನವಾಗಿ ಯೋಚಿಸಿದ. ಬಗೆ ಹರಿಯಲಿಲ್ಲ. ರಾತ್ರಿಯಿಡೀ ಪ್ರಯಾಣವಿದೆ ಎಂದು ಮಾತ್ರ ಗೊತ್ತಾಯಿತು. ಆದರೆ ಎಲ್ಲಿಗೆ ಪಯಣ ಎಂದು ಅವರೂ ಹೇಳಲಿಲ್ಲ, ಇವನೂ ಕೇಳಲಿಲ್ಲ.

ಊಟವಾದ ನಂತರ ಅವರಲ್ಲಿ ಕೆಲವರು ತಂಬಾಕು, ಸಿಗರೇಟು ಸೇವಿಸಿದರು. ಇವನಿಗೆ ಸಿಗರೇಟು ಕೊಡಲು ಬಂದರು.

"ಯಾರರ ಕೊಟ್ರ ಆವಾಗಾವಗ ಚುಟ್ಟಾ ಸೇದ್ತೀನ್ರಿ" ಎಂದ. ಇವನಿಗಾಗಿ ಒಂದು ಕಟ್ಟು ಚುಟ್ಟಾ ಮತ್ತು ಬೆಂಕಿ ಪೆಟ್ಟಿಣ ಖರೀದಿಸಿಕೊಟ್ಟರು. ಒಂದು ಚುಟ್ಟಾ ಸೇದಿದ. ಹೊಟ್ಟೆ ಭಾರವಾಗಿತ್ತು, ತಲೆ ಹಗುರಾಗಿತ್ತು ಮತ್ತು ಕಣ್ಣುಗಳು ಎಳೆಯತೊಡಗಿದ್ದವು.

ಪ್ರಯಾಣ ಪ್ರಾರಂಭವಾಯಿತು. ಊರುಗಳು, ಹಳ್ಳಿಗಳು, ನಗರಗಳು ಒಂದರ ಹಿಂದೆ ಒಂದರಂತೆ ಹಿಂದೆ ಸರಿಯತೊಡಗಿದ್ದವು. ಫಕೀರನಿಗೆ ಲೈಟು ಮತ್ತು ಕತ್ತಲೆಯ ಬೆಳಕಿನಾಟದಲ್ಲಿ ನಿದ್ದೆ ಬಂದು ಪಕ್ಕದಲ್ಲಿ ಕಿಟಕಿಗೆ ತಲೆ ವಾಲಿಸಿ ಗೊರಕೆ ಹೊಡೆಯತೊಡಗಿದ.

ಅವನು ಕಣ್ಣು ತೆರೆದಾಗ ಚುಮುಚುಮು ನಸುಕು. ಒಂದು ಕಡೆ ಕಾರುಗಳನ್ನು ನಿಲ್ಲಿಸಿದ್ದರು. ಅವರಂತೆ ಇವನೂ ಇಳಿದ. ಅದೊಂದು ಚಹಾ ದುಕಾನ. ಅವರೆಲ್ಲ ಮುಖ ತೊಳೆದು ಚಹಾ ಕುಡಿಯತೊಡಗಿದ್ದರು. ಇವನೂ ಹಾಗೇ ಮಾಡಿದ. ಅಷ್ಟೊಂದು ವಾಹನಗಳು, ಅಷ್ಟು ಬೇಗ ಅಲ್ಲಿ ಓಡಾಡುತ್ತಿರುವುದನ್ನು ಕಂಡು ಸುರೇಶಣ್ಣ ಇರುವ ಬೆಂಗಳೂರು ಇದೇ ಇರಬೇಕು ಎಂದುಕೊಂಡ. ಆದರೆ ಸುತ್ತಲಿರುವ ಯಾರೂ ತನ್ನ ಭಾಷೆ ಮಾತನಾಡುತ್ತಿಲ್ಲ.

"ಇದು ಯಾವೂರು?" ಫಕೀರ ಕೇಳಿದ.

"ಹೇಳಿದಷ್ಟು ಮಾಡು. ಸುರೇಶಣ್ಣ ಇಲ್ಲೇ ಅದಾರ. ನಿನಗ ಭೆಟ್ಟಿ ಮಾಡಸ್ತೇವಿ" ಗೊಗ್ಗರು ದನಿಯವನು ಬೆದರಿಸುವಂತೆ ಹೇಳಿದ. ಎಲ್ಲರೂ ಒಂದು ಹೋಟೆಲ್ ಹೊಕ್ಕು ಎರಡು ಕೋಣೆಗಳಲ್ಲಿ